# ಗಂಗಾಸ್ನಾನ

ಮಂಡಗದ್ದೆ ಪ್ರಕಾಶ ಬಾಬು ಕೆ.ಆರ್.

ಗಂಗೆಯನ್ನು ಶ್ರೀರಾಮಕೃಷ್ಣರು ‘ಬ್ರಹ್ಮವಾರಿ’ ಎನ್ನುತ್ತಿದ್ದರು. ಸರ್ವಪಾಪಗಳನ್ನು ತೊಳೆಯುವ ಈ ಪವಿತ್ರನದಿಯ ಬಿಂದು, ಕಣ ಪ್ರತಿಯೊಂದೂ ಅತಿಪಾವನವೆಂದು ಹಿಂದೂಗಳು ಯುಗಯುಗಗಳಿಂದಲೂ ನಂಬುತ್ತ ಬಂದಿದ್ದಾರೆ. ಈ ನದಿಯಲ್ಲಿ ಮಿಂದವರೇ ಧನ್ಯರು. ಈ ಬಗ್ಗೆ ಇಲ್ಲಿ ವಿವರಿಸಿರುವ ಲೇಖಕರು ಧರ್ಮ, ಸಂಸ್ಕೃತಿಗಳ ಚಿಂತಕರು. ಬೆಂಗಳೂರು ರಾಮಕೃಷ್ಣ ಮಠದ ಭಕ್ತರೂ ಆಗಿರುವ ಅವರ ಅನೇಕ ಲೇಖನಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಕೆಲವು ಗ್ರಂಥಗಳನ್ನೂ ಅವರು ರಚಿಸಿದ್ದಾರೆ.



‘ಗಂಗಾಸ್ನಾನ, ತುಂಗಾಪಾನ’ ಎಂಬ ಮಾತಿನಂತೆ ನಮ್ಮ ಪರಂಪರೆಯು ಗಂಗಾಸ್ನಾನಕ್ಕೆ ಅತಿ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟಿದೆ. ತುಂಗಾನದಿಯ ನೀರು ಕುಡಿಯಲು ಅತಿ ಸವಿ ಮತ್ತು ರುಚಿಯಾಗಿರುತ್ತದೆ.

ಭಾರತ ದೇಶವು ಒಂದು ಪವಿತ್ರ ಕ್ಷೇತ್ರ. ಇಲ್ಲಿರುವ ಪರ್ವತಗಳು, ಸರೋವರಗಳು, ನದಿಗಳು, ಶಕ್ತಿಪೀಠಗಳು ಮುಖ್ಯವಾಗಿ ಹಿಮಾಲಯ ಪರ್ವತವು ಈ ಪುಣ್ಯಭೂಮಿಯ ಕೊಡುಗೆಯಾಗಿದೆ. ಇವನ್ನು ವರ್ಣನೆ ಮಾಡಲು ಶಬ್ದಗಳು ಸಾಲದು.

‘ಹಿಮಾಲಯ’ ಎಂಬ ಪದಕ್ಕೆ ವಿಶೇಷ ಅರ್ಥವಿದೆ. ಹಿಮ ಎಂದರೆ ಮಂಜು, ‘ಆಲಯ’ ಎಂದರೆ ನಿವಾಸ (ಮನೆ) ಎಂದು. ಈ ಸ್ಥಳದಲ್ಲಿ ಸಾಕ್ಷಾತ್ ಶಿವನೇ ನೆಲೆಸಿರುವನು. ಈ ಹಿಮಾಲಯದಲ್ಲಿಯೇ ಗಂಗೆಯ ಉಗಮಸ್ಥಾನ ಇರುವುದು. ಚಾರ್‌ಧಾಮ್‌ನಲ್ಲಿ ಒಂದಾದ ಗಂಗೋತ್ರಿಯಿಂದ ೧೮ ಕಿ.ಮೀ ಬೆಟ್ಟದ ಮೇಲೆ ಹೋದರೆ ‘ಗೋಮುಖ’ ಸಿಗುವುದು. ಇಲ್ಲಿಗೆ ಚಾರಣದಲ್ಲಿ ಹೋಗಬೇಕು. ಈ ಸ್ಥಳದಲ್ಲಿಯೇ ಗಂಗೆ ಹುಟ್ಟುವುದು. ಇಲ್ಲಿ ಪರ್ವತವು ಗೋವಿನ ಮುಖದಂತಿರುವುದರಿಂದ ಇದಕ್ಕೆ ‘ಗೋಮುಖ’ ಎಂದು ಹೆಸರು ಬಂದಿದೆ.

ಹಿಮಾಲಯದಲ್ಲಿ ಹರಿಯುವ ನದಿಗಳು ಭಾರತದ ಭೂರಮೆಯನ್ನು ಫಲವತ್ತುಗೊಳಿಸಿ ೬೦೦ ದಶಲಕ್ಷ ಜನಕ್ಕೆ ಅನ್ನಾಹಾರ ದೊರಕಿಸುತ್ತದೆ. ಈ ಹಿಮಾಲಯದಿಂದ ಹಲವಾರು ನದಿಗಳು ಹರಿದು ಬಂದರೂ ‘ಗಂಗೆ’ಗೆ ಹೆಚ್ಚಿನ ಪ್ರಾಮುಖ್ಯತೆ ಇದೆ. ಏಕೆಂದರೆ ಶ್ರೀಕೃಷ್ಣನು ಭಗವದ್ಗೀತೆಯಲ್ಲಿ , ‘ನದಿಗಳಲ್ಲಿ ಗಂಗೆ ನಾನು; ಪರ್ವತಗಳಲ್ಲಿ ಹಿಮಾಲಯವು ನಾನು’ ಎಂದು ಹೇಳಿರುವನು.

ಈ ಗಂಗಾನದಿಯು ಭಗೀರಥನ ಪ್ರಯತ್ನದಿಂದ ಶಿವನ ಜಟೆಯಿಂದ ಧರೆಗಿಳಿದು ಬಂದ ನದಿ. ಗಂಗೆಯು ಹರಿಯುವಾಗ ತನ್ನ ಜಲದಲ್ಲಿ ಚಿಕಿತ್ಸಕ ಮತ್ತು ಪೋಷಕ ಶಕ್ತಿಭರಿತ ಖನಿಜಾಂಶವನ್ನು ಹೊತ್ತು ಸಾಗುತ್ತದೆ. ಇದರ ದಡದಲ್ಲಿ ವಾಸಿಸುವ ಹಾಗೂ ದಿನಾ ಗಂಗಾಜಲವನ್ನು ಸ್ನಾನ ಮಾಡುವರಿಗೆ ಚರ್ಮರೋಗಗಳು ಅಪರೂಪ ಎನ್ನಬಹುದು. ಗಂಗಾಜಲವನ್ನು ಬಾಟಲಿಯಲ್ಲಿ ಹಲವು ವರ್ಷಗಳ ತನಕ ಇಟ್ಟಿದ್ದರೂ ಅದು ಕೆಡುವುದಿಲ್ಲ. ಈ ಗಂಗಾಜಲವು ಪ್ರತಿಯೊಬ್ಬರ ಮನೆಯಲ್ಲೂ ಇರಬೇಕು. ವ್ಯಕ್ತಿಯ ಮರಣಾವಸ್ಥೆಯಲ್ಲಿ ಇದನ್ನು ಕುಡಿಸಲಾಗುತ್ತದೆ. ಕೊನೆಗಾಲದಲ್ಲಿ ಗಂಗಾಜಲವನ್ನು ಸೇವಿಸಿದರೆ ಸ್ವರ್ಗಲೋಕ ಲಭ್ಯವಾಗುವುದು ಎಂಬುದು ನಂಬಿಕೆ. ಗಂಗಾಸ್ನಾನದಿಂದ ಪಾಪ ಪರಿಹಾರವಾಗುವುದೆಂಬ ನಂಬಿಕೆ ಇದೆ. ಶ್ರೀರಾಮಕೃಷ್ಣ ಪರಮಹಂಸರು ಇದರ ಬಗ್ಗೆ ಒಂದು ಮಾತು ಹೇಳುವರು: ‘‘ನಾವು ಗಂಗಾಸ್ನಾನ ಮಾಡಿದಾಗ (ನೀರಿನಲ್ಲಿ ಮುಳುಗಿದಾಗ) ನಾವು ಮಾಡಿದ ಪಾಪಗಳೆಲ್ಲಾ ನದಿಯ ದಡದಲ್ಲಿರುವ ಮರದ ಮೇಲೆ

ಕುಳಿತಿರುತ್ತದೆ. ನೀರಿನಿಂದ ಎದ್ದು ಬಂದ ನಂತರ ಅವೆಲ್ಲವೂ ನಮ್ಮೊಳಗೆ ಸೇರುತ್ತವೆ'' ಎಂದು. ಅಂದರೆ, ನಾವು ಪಾಪ ಮಾಡುತ್ತಲೇ ಇರುತ್ತೇವೆ, ಅದನ್ನು ತೊಳೆಯಲು ಗಂಗಾಸ್ನಾನ ಮಾಡುತ್ತಲೇ ಇರುತ್ತೇವೆ.

ಕರ್ಮಸಿದ್ಧಾಂತದ ಪ್ರಕಾರ, ಕರ್ಮಫಲಗಳನ್ನು ಅನುಭವಿಸಲೇಬೇಕು. ಯಾವುದೇ ಕೆಲಸವನ್ನು ರಾಗದ್ವೇಷ ರಹಿತವಾಗಿ ಮಾಡುವುದರಿಂದ ಪಾಪ-ಪುಣ್ಯಗಳಿರುವುದಿಲ್ಲ.

ಗಂಗಾನದಿ ಹರಿದು ಬರುವಾಗ ಅದಕ್ಕೆ ಅನೇಕ ಉಪನದಿಗಳು ಸೇರಿಕೊಳ್ಳುತ್ತದೆ. ಇದರಿಂದ ಅದು ತನ್ನ ಪಾವಿತ್ರ್ಯವನ್ನು ಕಳೆದುಕೊಳ್ಳುತ್ತದೆ. ಗಂಗೆಯ ದಡದಲ್ಲಿರುವ ಹಳ್ಳಿಯ ಜನರು ಮರಣ ಹೊಂದಿದಾಗ ಶವವನ್ನು ಗಂಗೆಗೆ ಎಸೆಯುವರು. ಆಗ ಗಂಗೆ ಕಲುಷಿತವಾಗುವುದು. ಇದರೊಂದಿಗೆ ಇನ್ನೂ ಹಲವಾರು ಕಾರಣಗಳಿಂದ ಗಂಗಾನದಿಯು ಪಾವಿತ್ರ್ಯತೆಯನ್ನು ಕಳೆದುಕೊಳ್ಳುತ್ತಿರುವುದನ್ನು ಗಮನಿಸಿದ ಸರ್ಕಾರವು 'ಗಂಗಾ ಶುದ್ಧೀಕರಣ ಯೋಜನೆ'ಯನ್ನು ಹಮ್ಮಿಕೊಂಡು ಈಗಾಗಲೇ ಕೆಲಸವನ್ನು ಪ್ರಾರಂಭಿಸಿದೆ. ಇದಕಾಗಿ ಸಾವಿರಾರು ಕೋಟಿ ಹಣ ವೆಚ್ಚವಾಗುತ್ತಿದೆ. ಇದರಿಂದ ಈಗ ಗಂಗೆಯು ಮತ್ತೆ ಪಾವಿತ್ರ್ಯವನ್ನು ಪಡೆಯುತ್ತಿದೆ ಎನ್ನಬಹುದು.

ನಾವು ನಿತ್ಯ ಸ್ನಾನ ಮಾಡುವಾಗ '**ಗಂಗೇ ಚ ಯಮುನೇ ಚೈವ, ಗೋದಾವರಿ ಸರಸ್ವತಿ । ನರ್ಮದೇ ಸಿಂಧು ಕಾವೇರಿ ಜಲೇऽಸ್ಮಿನ್ ಸನ್ನಿಧಿಂ ಕುರು**' ಎಂಬ ಶ್ಲೋಕವನ್ನು ಹೇಳಿಕೊಂಡು ಸ್ನಾನ ಮಾಡುವುದರಿಂದ ಗಂಗಾಸ್ನಾನದಿಂದ ದೊರೆಯುವ ಪುಣ್ಯ ಬರುವುದು. ಗಂಗಾ ಜಯಂತಿಯನ್ನು ಪ್ರತಿವರ್ಷ ಜ್ಯೇಷ್ಠ ಮಾಸದ ಶುಕ್ಲಪಕ್ಷದ ದಶಮಿ ದಿನದಂದು ಆಚರಿಸಲಾಗುವುದು. ಇದು ಉತ್ತರಭಾರತದಲ್ಲಿ ಅತಿ ಸಂಭ್ರಮದ ಹಬ್ಬವಾಗಿದೆ.

**ಗಂಗಾ ಆರತಿ:** ಪ್ರತಿದಿನ ಸಂಜೆ ಗಂಗೆಗೆ ಆರತಿಯನ್ನು ಬೆಳಗುವರು. ಪ್ರತಿ ದಿನ ಇದು ೨ ಗಂಟೆಗಳ ಕಾಲ ನಡೆಯುವುದು. ಈ ಆರತಿ ಮಾಡುವ ಕಂಭವು ೫ ರಿಂದ ೬ ಅಡಿ ಎತ್ತರ ಇರುತ್ತದೆ. ಇದನ್ನು ನೋಡುವುದೇ ಒಂದು ಪುಣ್ಯ. ಗಂಗಾ ಜಯಂತಿ ದಿನ ಆರತಿ ತಟ್ಟೆಯನ್ನು ಹತ್ತು ಬಗೆಯ ಹೂವು, ಗೋಧಿಹಿಟ್ಟು, ಬತ್ತಿ, ಸುಗಂಧ ದ್ರವ್ಯ, ಗಂಧ-ಹಾಲುಗಳಿಂದ ಅಲಂಕಾರ ಮಾಡಿರುತ್ತಾರೆ. ಹರಿದ್ವಾರದ **ಹರ ಕೆ ಪೌಡಿ** ಎಂಬಲ್ಲಿ ಪ್ರತಿದಿನ ಆರತಿ ಕಾರ್ಯಕ್ರಮ ಇರುತ್ತದೆ. ಕುಂಭಮೇಳದ ಸಮಯದಲ್ಲಿ ನಾಗಾ ಸಾಧುಗಳ ಡೇರೆಯಲ್ಲಿ ಸಂಜೆ ಆರತಿ ಜರಗುವುದು. ಹರಿದ್ವಾರಕ್ಕೆ ಹೋದಾಗ ಈ ಗಂಗಾ ಆರತಿಯನ್ನು ನೋಡಿ ಬರಲೇಬೇಕು, ಹಾಗೂ ಗಂಗಾಸ್ನಾನ ಮಾಡಲೇಬೇಕು. ಕುಂಭಮೇಳದಲ್ಲಿ ಮಾಡುವ ಗಂಗಾಸ್ನಾನಕ್ಕೆ 'ಕ್ರಿಯಾ ಸ್ನಾನ' ಅಥವಾ 'ಕುಂಭಮೇಳ ಸ್ನಾನ' ಎನ್ನುವರು. ಗಂಗಾಸ್ನಾನ ಮಾಡುವಾಗ ಸಾಮಾನ್ಯವಾಗಿ ೩ ಸಲ ಮುಳುಗುತ್ತಾರೆ. ಈ ಮೂರು ಏಕೆಂದರೆ, ಅಧಿಭೌತಿಕ, ಅಧಿದೈವಿಕ ಮತ್ತು ಆಧ್ಯಾತ್ಮಿಕ ಎಂಬ ತಾಪತ್ರಯಗಳಿಂದ ನಮಗೆ ತೊಂದರೆ ಬರದೆ ಇರಲಿ ಎಂದು. ಹರಿದ್ವಾರ ಮತ್ತು ಗಂಗೋತ್ರಿಯಲ್ಲಿರುವ ಕೆಲವು ಸಾಧುಸನ್ಯಾಸಿಗಳು ೩೬೫ ದಿನವೂ ಗಂಗಾಸ್ನಾನ ಮಾಡುವರು. ನಾನು ಹಿಮಾಲಯದಲ್ಲಿದ್ದಾಗ ಪ್ರತಿದಿನ ೯೦ ವರ್ಷದ ಸಂನ್ಯಾಸಿ ಒಬ್ಬರು ಗಂಗಾಸ್ನಾನಕ್ಕೆ ಬರುತ್ತಿದ್ದರು. ಅವರನ್ನು ನಾನು ಕೇಳಿದಾಗ, 'ನಾನು ಸಣ್ಣ ವಯಸ್ಸಿನಿಂದಲೂ ಅಂದರೆ ನನ್ನ ೪೦ನೇ ವರ್ಷದಿಂದಲೂ ಈ ಗಂಗಾಸ್ನಾನ ಮಾಡುತ್ತಿರುವೆ ಹಾಗೂ ಆರೋಗ್ಯದಿಂದಲೂ ಇರುವೆ' ಎಂದರು. ✽



ಶಾರದಾದೇವಿಯವರು ಗಂಗಾಪ್ರಿಯರು. ಗಂಗಾಸ್ನಾನವೆಂದರೆ ಅವರಿಗೆ ವಿಶೇಷ ಒಲವು, ದಕ್ಷಿಣೇಶ್ವರದಲ್ಲಿರುವವರೆಗೂ ಹದಿಮೂರು ವರ್ಷ ಕಾಲ ಮನಃತೃಪ್ತಿಯಾಗುವಷ್ಟು ಗಂಗಾಸ್ನಾನ ಮಾಡಿದವರು. ಆದರೆ ಈಗ ಗಂಗಾಸ್ನಾನ ತಪ್ಪಿಹೋಗಿ ಅವರ ಮನಸ್ಸಿಗೆ ಏನೋ ಕರಕರೆಯಾಗತೊಡಗಿತ್ತು. ಕೊನೆಗೊಂದು ದಿನ ಅವರು, ಹೇಗಾದರೂ ಮಾಡಿ ಕಲ್ಕತ್ತಕ್ಕೆ ಹೋಗಿ ಗಂಗಾಸ್ನಾನ ಮಾಡಿಕೊಂಡೇ ಬಂದುಬಿಡುವುದೆಂದು ನಿರ್ಧರಿಸಿದರು. ಅವರು ಹಾಗೆಂದುಕೊಂಡ ಕ್ಷಣವೇ ಆಶ್ಚರ್ಯಕರವಾಗಿ ಅವರಿಗೊಂದು ದರ್ಶನವಾಯಿತು – ಶ್ರೀ ರಾಮಕೃಷ್ಣರು ಅವರ ಮನೆಯ ಕಡೆಗೇ ನಡೆದುಕೊಂಡು ಬರುತ್ತಿದ್ದಾರೆ! ಹಿಂದೆಯೇ ನರೇಂದ್ರ, ರಾಖಾಲ, ಬಾಬುರಾಮ ಹಾಗೂ ಇನ್ನೂ ಅನೇಕ ಭಕ್ತರು ಕೂಡ ಬರುತ್ತಿದ್ದಾರೆ! ಹಾಗೆ ಬರುತ್ತಿದ್ದಂತೆಯೇ ಶ್ರೀರಾಮಕೃಷ್ಣರ ಪಾವನಕರ ಪಾದಗಳಿಂದ ಗಂಗೆ ಉದ್ಭವಿಸಿ ಅಲೆಅಲೆಯಾಗಿ ಹರಿದುಬರುತ್ತಿರುವುದನ್ನು ಶಾರದಾದೇವಿಯವರು ತಮ್ಮ ಬರಿಗಣ್ಣುಗಳಿಂದಲೇ ಕಂಡರು. ಅದನ್ನು ನೋಡಿದೊಡನೆ ಅವರಿಗೆ ಹೊಳೆಯಿತು: 'ಆಹ್ ! ಶ್ರೀರಾಮಕೃಷ್ಣರೇ ಎಲ್ಲವೂ ಆಗಿದ್ದಾರೆ ! ಗಂಗೆ ಕೂಡ ಅವರ ಪವಿತ್ರ ಪಾದಗಳಿಂದಲೇ ಉದ್ಭವಿಸಿರುವವಳಲ್ಲವೆ!' ಎಂದು. ಕೂಡಲೇ ಅವರು ಮನೆಯ ಪಕ್ಕದಲ್ಲೇ ಇದ್ದ ಗಿಡಗಳಿಂದ ಬೊಗಸೆಯ ತುಂಬ ಕೆಂಪುದಾಸವಾಳದ ಹೂಗಳನ್ನು ತಂದು ಆ ದಿವ್ಯಗಂಗೆಗೆ ಸಮರ್ಪಿಸಿದರು.

*'ಶ್ರೀ ಶಾರದಾದೇವಿ ಜೀವನಗಂಗಾ', ಪು. ೧೮೫*